**ದಿನಾಂಕಃ 17.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.MEM ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಕ್ಕ ಪಕ್ಕದವರು ಬಂದು ಅಪಘಾತದ ವಿಷಯವನ್ನು ನನಗೆ ಹೇಳಿದ್ದಾರೆ, ಆದರೆ ಅವರುಗಳ ಹೆಸರು ಹೇಳಲು ಸಾಧ್ಯವಿಲ್ಲ. ನಾನು ಅಪಘಾತದ ಸ್ಥಳಕ್ಕೆ ಹೋಗಿ ನೋಡಿದಾಗ ನನ್ನ ಗಂಡನು ಆ ರಸ್ತೆಯಲ್ಲಿಯೇ ಬಿದ್ದಿದ್ದರು. ನನ್ನ ಗಂಡನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ನಾನು ಮತ್ತು ನನ್ನ ಮಗನು ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು.

2) ನನ್ನ ಗಂಡನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಪಘಾತವು ಹೇಗೆ ಆಯಿತು ಎಂಬ ವಿಷಯವನ್ನು ವೈದ್ಯರು ನನ್ನಿಂದ ಕೇಳಿ ತಿಳಿದುಕೊಂಡಿರುವುದಿಲ್ಲ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನ್ನ ಗಂಡನ ಕಾಲಿಗೆ ಚಿಕಿತ್ಸೆ ಕೊಟ್ಟಿದ್ದಾರೆ ಎಂದರೆ ನನ್ನ ಗಂಡನ ತಲೆಗೂ ಸಹಾ ಏಟುಗಳು ಆಗಿದ್ದವು. ಯಾವ ತಾರೀಖಿನಂದು ನನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಲಾಯಿತು ಎಂದು ಹೇಳಲು ಸಾಧ್ಯವಿಲ್ಲ, ಆದರೆ ನನ್ನ ಗಂಡನು 20 ದಿನಗಳ ಕಾಲ ಆಸ್ಪತ್ರೆಯಲ್ಲಿ ಇದ್ದರು.

3) ಅಪಘಾತದ ಬಗ್ಗೆ ಪೋಲಿಸರಿಗೆ ನಾವು ದೂರನ್ನು ನೀಡಿರುವುದಿಲ್ಲ, ಬೇರೆ ಯಾರೋ ನೀಡಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ನಮ್ಮ ಗಂಡನನ್ನು ನಾವು ನಮ್ಮ ಮನೆಗೆ ಕರೆದುಕೊಂಡು ಹೋದೆವು.

4) ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸಿಕೊಂಡು ಬಂದ ನಂತರ ಒಟ್ಟು **2** ಬಾರಿ ಫಾಲೋಅಪ್ ಚಿಕಿತ್ಸೆಯನ್ನು ಕೊಡಿಸಿದ್ದೇವೆ, ಆದರೆ ಆ ಬಗ್ಗೆ ಯಾವುದೇ ದಾಖಲೆಗಳು ನಮ್ಮ ಬಳಿ ಇರುವುದಿಲ್ಲ. ಆ ರೀತಿ ಎರಡು ಬಾರಿ ಮುಂದುವರೆದ ಚಿಕಿತ್ಸೆಗಾಗಿ ಕರೆದುಕೊಂಡು ಹೋದಂತಹ ಸಂದರ್ಭದಲ್ಲಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನನ್ನ ಗಂಡನ ತಲೆಗೆ ಮತ್ತು ಕಾಲಿಗೆ ಚಿಕಿತ್ಸೆಯನ್ನು ಕೊಟ್ಟಿದ್ದಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದಾರೆ, ಸಮಯ ನೀಡಿದೆ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.